Seating Arrangements

Mr. SPEAKER.—I have to inform the House that I have received a communication from the Hon. Chief Minister to change the seating arrangements in respect of certain members. I have also received a communication from Hon. Sri Siddaveerappa seeking recognition to his party and to provide separate seating accommodation for his party members. Similarly, I have received another communication from Sri T. R. Shamanna seeking recognition to his party and to provide separate seats to the members of his party. I shall take into consideration all these requests and also any other requests that may come in the course of the day and deal with then impartially in accordance with well known accepted principles.

Notice of Adjournment Motion

re: Excesses by the Police upon Students in Chintamani

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅಧ್ಯಕ್ಷರೇ, ಚಿಂತಾಮಣಿ ಗೋಲೀಬಾರ್ ಬಗ್ಗೆ ನಾನು, ಮಾನ್ಯ ಶ್ರೀ ಕೃಷ್ಣನ್ ಅವರು ಮತ್ತು ಮಾನ್ಯ ಶ್ರೀ ನಾಗಪ್ಪನವರು ಸೇರಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆವು. ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಅಲ್ಲಿ ಹೋಟಲ್‌ಗಳಲ್ಲಿ ತಿಂಡಿ ಬೆಲೆಯನ್ನು ಇಳಿಸಬೇಕೆಂದು ವಿದ್ಯಾರ್ಥಿಗಳು ಚಳುವಳಿ ನಡೆಸಿದ ಸಂದರ್ಭದಲ್ಲಿ ವಿದ್ಯಾರ್ಥಿಗಳ ವಿಷಯದಲ್ಲಿ ಪೋಲೀಸಿನವರು ಎಂತಹ ಕೃತ್ಯವನ್ನು ಎಸಗಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ದುಃಖವಾಗುತ್ತದೆ. ಅಲ್ಲಿ ಪೋಲೀಸಿನವರು ಗೂಂಡಾಗಿರಿ ನಡೆಸಿ ಸುಮಾರು 3 ಜನರು ಸತ್ತಿದ್ದಾರೆ.

ಅಧ್ಯಕ್ಷರು.—ನಾನು ಇನ್ನೂ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಅಡ್ಮಿಟ್ ಮಾಡಿಲ್ಲ. ನೀವು ಅದನ್ನು ಏತಕ್ಕೆ ಅಡ್ಮಿಟ್ ಮಾಡಬೇಕೆನ್ನುವ ವಿಷಯದಬಗ್ಗೆ ಹೇಳಬಹುದು. ಅದು ಅಡ್ಮಿಟ್ ಮಾಡಿದಮೇಲೆ ಈ ವಿಚಾರ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ. ಹಿಂದೆ ಎಂದೂ ನಡೆಯದಂಥ ಹೋಟಲುಗಳಲ್ಲಿ ತಿಂಡಿ ಬೆಲೆ ಇಳಿಸಬೇಕೆಂಬ ಚಳುವಳಿ ನಡೆದಿದೆ. ಇತ್ತೀಚೆಗೆ ಪೋಲೀಸಿನವರ ಗೂಂಡಾಗಿರಿ ಎಲ್ಲಾ ಕಡೆಯೂ ಜಾಸ್ತಿಯಾಗಿದೆ. ಅಲ್ಲಿ ನಡೆದಂಥ ಘಟನೆ ನೋಡಿದರೆ ಅಂಥಾದ್ದನ್ನು ಮನುಷ್ಯ ಮಾತ್ರದವನು ಮಾಡುವಂಥಾದ್ದಲ್ಲ. ಇದಕ್ಕೆ ಸರ್ಕಾರದವರು ಜವಾಬ್ದಾರರು. ಈ ಸಂಬಂಧದಲ್ಲಿ ಯಾರು ಅಧಿಕಾರವನ್ನು ವಹಿಸಿದ್ದರೋ ಅವರದು ತಪ್ಪಾಗಿದೆ. ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಇದರ ಬಗ್ಗೆ ಈ ಸಭೆಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಹೇಳುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ನಾವು ಅಡ್ಜರ್ನ್‌ಮೆಂಟ್ ಮೋಷನ್ನನ್ನು ರೂಲ್ಸ್ 50, 51 ಮತ್ತು 52ರ ಆಧಾರದಮೇಲೆ ಕಳುಹಿಸಿದ್ದೇವೆ. ಅದರ ಪ್ರಕಾರ ಅದು ಸಾರ್ವಜನಿಕ ಪ್ರಾಮುಖ್ಯತೆ ದೃಷ್ಟಿಯಿಂದ ಅತಿ ಜರೂರಾದ ವಿಷಯ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಚಿಂತಾಮಣಿಯಲ್ಲಿ ಗೋಲಿಬಾರ್ ಆಗಿರುವುದು ಐದಾರು ದಿವಸಗಳ ಹಿಂದೆ. ಆದ್ದರಿಂದ ಅದು ಅತಿ ಜರೂರಾಗಿರತಕ್ಕ ವಿಚಾರವಾಗಿದೆ. ಇದು ರಾಜ್ಯಕ್ಕೆ ಸಂಬಂಧಪಟ್ಟುದು. ಅಲ್ಲಿ ಭಾರಿ ಗೋಲಿಬಾರ್ ಆಗಿದೆ. ಹಾನಿಯೂ ಆಗಿದೆ. ಮೂರು ಜನರು ಸತ್ತಿದ್ದಾರೆ. ಅನೇಕರಿಗೆ ಏಟು ಬಿದ್ದಿದೆ. ಈ ವಿಷಯಗಳನ್ನು ತಾವೂ ಸಹ ಪತ್ರಿಕೆಗಳಲ್ಲಿ ಓದಿದ್ದೀರಿ. ಆದ್ದರಿಂದ ನಾನು ಹೆಚ್ಚಾಗಿ ಇದರಮೇಲೆ ಹೇಳಬೇಕಾಗಿಲ್ಲ. ಅಲ್ಲಿ ಹೋಟಲ್‌ಗಳಲ್ಲಿ ತಿಂಡಿ ದರಗಳನ್ನು ಇಳಿಸಿ ಎಂಬ ಬಗ್ಗೆ ಚಳುವಳಿ ನಡೆದಿದೆ. ಇದು ಎಲ್ಲರಿಗೂ ಸಂಬಂಧಪಟ್ಟುದು.

ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮೇಲೆ ಗೋಲೀಬಾರ್ ಮಾಡಿರುವುದು ದುರದೃಷ್ಟಕರ. ಹಾಗೂ ಖಂಡನೀಯ. ಆದ್ದರಿಂದ ಇದು ಬಹಳ ಜರೂರಾದ ವಿಷಯ ಮತ್ತು ಸಾರ್ವಜನಿಕ ಪ್ರಾಮುಖ್ಯತೆಗೆ ಸಂಬಂಧಪಟ್ಟಿದ್ದು. ಈ ಎರಡು ದೃಷ್ಟಿಯಿಂದ ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಇದರಲ್ಲಿ ಸರ್ಕಾರದ ಒಂದು ಪಾಲಿಸಿ, ಥೋರಣ್ ಇರಬೇಕು. ಅದನ್ನು ಯಾವ ರೀತಿ ಅನುಸರಿಸಬೇಕೆಂಬುದು ಮುಖ್ಯ. ಆದ್ದರಿಂದ ಅದರ ಬಗ್ಗೆ ಸರ್ಕಾರದವರು ಸ್ಪಷ್ಟವಾದ ಉತ್ತರವನ್ನು ಕೊಡುವುದಕ್ಕೆ ಮತ್ತು ನಮಗೆ ಈ ವಿಷಯದಲ್ಲಿ ಚರ್ಚೆಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಮಾನ್ಯ ಅಧ್ಯಕ್ಷರೇ, ನಾನು ಮತ್ತು ಇನ್ನೂ ಕೆಲವು ಸ್ನೇಹಿತರು ಸೇರಿ ಈ ಸಂದರ್ಭದಲ್ಲಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೆಂದು ನಾನು ಭಾವಿಸುತ್ತೇನೆ. ಮೊದಲೇ ಕೆಲವು ಮಾನ್ಯ ಸ್ನೇಹಿತರು ಈ ವಿಷಯದ ಜರೂರು ಹಾಗೂ ಪ್ರಾಮುಖ್ಯತೆಯ ಬಗ್ಗೆ ಹೇಳಿದ್ದಾರೆ. ನಾನು ಅದರ ಬಗ್ಗೆ ಹೇಳಬೇಕಾಗಿಲ್ಲ. ಈಗ ಮುಖ್ಯವಾಗಿ ಅಲ್ಲಿ ರಾ ಅಂಡ್ ಆರ್ಡರ್ ಮೆಂಟೇನ್ ಮಾಡುವ ಕರ್ತವ್ಯ ಸರ್ಕಾರದವರಿಗೆ ಇದೆ. ಆ ಕರ್ತವ್ಯ ನಿರ್ವಹಣೆಯ ಕಾಲದಲ್ಲಿ ಸರ್ಕಾರಕ್ಕೆ ಡಿಸ್ಕ್ರಿಷನ್ ಎಂಬುದೂ ಕೂಡ ಇರಬೇಕಾಗುತ್ತದೆ. ಇಂತಹ ಒಂದು ವಿಶೇಷ ಸಂದರ್ಭದಲ್ಲಿ ಚಿಂತಾಮಣಿಯಲ್ಲಿ ನಡೆದಂಥ ಗೋಲೀಬಾರ್ ಘಟನೆಯಲ್ಲಿ ಸರ್ಕಾರದವರು ಸಾಕಷ್ಟು ಡಿಸ್ಕ್ರಿಷನ್ ಉಪಯೋಗ ಮಾಡದೇ ಇದ್ದುದು ತಪ್ಪು. ಇಲ್ಲಿ ಮೂರು ಜನರು ಕೂಡಾ ಸತ್ತಿದ್ದಾರೆ. ಈ ವಿಚಾರ ಬಹಳ ಪ್ರಾಮುಖ್ಯವಾದಂಥಾದ್ದು. ನಮಗೆ ತಿಳಿದಿರುವ ಹಾಗೆ ಪೋಲೀಸ್ ಅಧಿಕಾರಿಗಳು ಅವರ ಕರ್ತವ್ಯ ನಿರ್ವಹಣೆ ಮಾಡುವಾಗ ಜವಾಬ್ದಾರಿಯಿಂದ ವರ್ತಿಸದೇ ಇದ್ದುದೋ ಅಥವಾ ಅದರ ಜೊತೆಗೆ ಯಾರೋ ಸ್ಥಳೀಯ ಹೋಟಿಲಿನ ಮಾಲೀಕರ ಪರವಾಗಿ ವರ್ತಿಸಿದ್ದೋ ಕಾರಣವಾಗಿದೆ. ಈ ಒಂದು ತಾರತಮ್ಯ ದೃಷ್ಟಿಯಿಂದ ಯಾರೇ ಪೋಲೀಸ್ ಅಧಿಕಾರಿಗಳಾಗಲೀ ಯಾರೊಬ್ಬರ ಕಡೆಗೂ ವಾಲದೇ ಇದ್ದಿದ್ದ ಪಕ್ಷದಲ್ಲಿ ಇಂತಹ ದುರ್ವರ್ತನೆ ನಡೆಯುತ್ತಿರಲಿಲ್ಲ. ಹಾಗೆಯೇ ಈ ಸಂದರ್ಭದಲ್ಲಿ ಹೋಂ ಸೆಕ್ರೆಟರಿಯವರು ಒಂದು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಈ ವಿಷಯವಾಗಿ ಮಾತನಾಡಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಸಾರ್ವಜನಿಕ ದೃಷ್ಟಿಯಿಂದ ಪೋಲೀಸಿನವರ ವರ್ತನೆ ಅಥವಾ ಅವರು ಗೋಲೀಬಾರ್ ಮಾಡುವ ಅಗತ್ಯವಿರಲಿಲ್ಲವೆಂದು ಅವರ ಒಂದು ಪತ್ರಿಕೆ ಹೇಳಿಕೆಯಲ್ಲಿದೆ. ಆದ್ದರಿಂದ ಈ ವಿಚಾರ ಬಹಳ ಪ್ರಾಮುಖ್ಯವಾಗಿರುವುದರಿಂದ ತಾವು ಇದನ್ನು ಪರಿಶೀಲನೆ ಮಾಡಿ ಈ ನಿಲುವಳಿ ಸೂಚನೆಯನ್ನು ಅಲೌ ಮಾಡಬೇಕಾದುದು ಮುಖ್ಯ. ಸಾರ್ವಜನಿಕರ ಅಭಿಪ್ರಾಯದಲ್ಲಿ ಪೋಲೀಸಿನವರು ಅಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ, ಅತಿಯಾಗಿ ಉಪಯೋಗ ಮಾಡಿದ್ದಾರೆ, ಸಂದರ್ಭಕ್ಕನುಗುಣವಾಗಿ ಮಾಡಿಲ್ಲ, ಯಾರೋ ಹೋಟಲ್ ವಾಲೀಕರ ರಕ್ಷಣೆ ಗೋಸ್ಕರ ಇಷ್ಟು ದೂರ ಹೋಗಿ ಗೋಲೀಬಾರ್ ಮಾಡಿದ್ದಾರೆ ಎನ್ನುವುದಾಗಿದೆ. ಆದ್ದರಿಂದ ಈ ಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡುವುದು ಅಗತ್ಯವಾಗಿದೆ. ಈ ಕಾರಣದಿಂದ ಈ ನಿಲುವಳಿ ಸೂಚನೆಯನ್ನು ಅಲೌ ಮಾಡಬೇಕು, ಮತ್ತು ಚರ್ಚೆಗೆ ತೆಗೆದುಕೊಳ್ಳಬೇಕು.

† ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಶ್ರೀನಿವಾಸಪುರ).—ಸಾರ್ವಜನಿಕ ಪ್ರಾಮುಖ್ಯತೆ ವುಳ್ಳಂಥ ಮತ್ತು ಚಿಂತಾಮಣಿಯಲ್ಲಿ ಇತ್ತೀಚೆಗೆ ನಡೆದ ಗೋಲೀಬಾರಿನ ವಿಚಾರದಲ್ಲಿ ಬಂದಿರ ತಕ್ಕಂಥ ನಿಲುವಳಿ ಸೂಚನೆಗೆ ತಾವು ಅನುಮತಿಕೊಡಲು ಕಾನೂನಿನ ಯಾವ ಬಾಧಕವೂ ಇರುವುದಿಲ್ಲ. ಮಾನ್ಯ ದೇವರಾಜ ಅರಸರಿಗೆ ಈ ವಿಷಯ ಚೆನ್ನಾಗಿ ಗೊತ್ತಿದೆ, ಏಕೆಂದರೆ ಅವರು ಅವರ ಸ್ನೇಹಿತರನ್ನು ಆಲ್ಲಿಗೆ ಕಳುಹಿಸಿ ವಿಷಯಗಳನ್ನು ಪರಿಶೀಲಿಸಿದ್ದಾರೆ. ಆದ್ದರಿಂದ ಅದನ್ನು ನಾನು ವಿಶದವಾಗಿ ಹೇಳಲು ಇಷ್ಟಪಡುವುದಿಲ್ಲ. ಮುಖ್ಯವಾಗಿ ಗೋಲೀಬಾರಿಗೆ ಕಾರಣ ವಿನಿತ್ತು? ಪ್ರಚೋದನೆ ಯಾರಿಂದ ನಡೆಯಿತು? ವಿದ್ಯಾರ್ಥಿಗಳು ಈ ರೀತಿ ಪ್ರತಿಭಟನೆ ಮಾಡಬೇಕೆಂದು ಪೂರ್ವಭಾವಿಯಾಗಿ ಯೋಚನೆ ಮಾಡಿದ್ದರೇ? ಹಾಗೆ ಮಾಡಿದ್ದ ಪಕ್ಷದಲ್ಲಿ ಅದಕ್ಕೆ ಕಾರಣ ವಿನಿತ್ತು? ಇದು ಪ್ರಾಮುಖ್ಯವಾದ ವಿಷಯ. ಗೋಲೀಬಾರು ಮಾಡಿದ ಪರಿಣಾಮವಾಗಿ ನಿರಪರಾಧಿಗಳು ಆದ ಮೂರು ಜನ ಗುಂಡಿನ ಬಾಯಿಗೆ ತುತ್ತಾಗಿದ್ದಾರೆ. ಇದು ಅನ್ಯಾಯ. ಪೆಲಿಫೋನಿನಿಂದ ತಿಳಿದಿರುವ ಪ್ರಕಾರ ಪೋಲೀಸಿನವರು ಅನೇಕ ನಾಗರೀಕರನ್ನು ಹಿಡಿದು ಜೈಲಿನಲ್ಲಿ ಕೂಡಿಸಿದ್ದಾರೆ. ಪರಿಸ್ಥಿತಿಯನ್ನು ಕಾದು ನೋಡಬೇಕು. ಆದುದರಿಂದ ಇದು ದೀರ್ಘವಾಗಿ ಚರ್ಚೆಮಾಡಬೇಕಾದ ವಿಷಯ. ದಯವಿಟ್ಟು ಈ ನಿಲುವಳಿ ಸೂಚನೆಯನ್ನು ಚರ್ಚೆಮಾಡಲು ಅವಕಾಶಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಹೆಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ನನ್ನ ಸ್ನೇಹಿತರು ಹೇಳಿರುವುದರ ಜೊತೆಗೆ ಇನ್ನೂ ಹೆಚ್ಚಾಗಿ ಹೇಳುವುದು ಏನೂ ಇಲ್ಲ. ಒಂದು ಅಂಶವನ್ನು ಮಾತ್ರ ಸೂಚನೆ ಮಾಡುತ್ತೇನೆ. ಗೋಲೀಬಾರಿನ ಪ್ರಸಂಗ ಬರಬೇಕಾದರೆ ಸಾಮಾನ್ಯ ಉದ್ರೇಕ ಪರಿಸ್ಥಿತಿ ಇರಬೇಕಾದುದು ಸ್ವಾಭಾವಿಕ. ಚಿಂತಾಮಣಿ ಬಹಳ ಸಣ್ಣ ಜಾಗ ಮತ್ತು ವಿಷಯ ಕೂಡ ಬಹಳ ಸಣ್ಣದು. ಪರಿಸ್ಥಿತಿ ಹೀಗಿರುವಾಗ ಗೋಲೀಬಾರು ಮಾಡಬೇಕಾದಷ್ಟು ಪ್ರಮಾಣದಲ್ಲಿ ಈ ಉದ್ರೇಕ ಪರಿಸ್ಥಿತಿ ಇತ್ತೇ ಎಂದು ಊಹಿಸುವುದಕ್ಕೂ ಸಾಧ್ಯವಿದಂತ ವಿಷಯ. ಮಾನ್ಯ ಸದಸ್ಯರಾದ ಅರಸ್ ರವರು ಹೇಳಿದರು ಪೋಲೀಸಿನವರು ಏನಾದರೂ ಸ್ವಲ್ಪ ವಿವೇಚನೆಯಿಂದ ವರ್ತಿಸಿದ್ದರೆ ಅವರು ಗೋಲೀಬಾರು ಮಾಡುವಂಥ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು. ಸರ್ಕಾರದ ಜವಾಬ್ದಾರಿ ಸಾರ್ವಜನಿಕ ಹಿತರಕ್ಷಣೆ ಮಾಡುವುದು. ಅದಕ್ಕೆ ಬೇಕಾದ ಕ್ರಮಗಳನ್ನು ಕಾನೂನು ಪ್ರಕಾರ ತೆಗೆದು ಕೊಳ್ಳಬೇಕಾದುದು ಅವಶ್ಯಕ ಎಂದು ಹೇಳುವವರಲ್ಲಿ ನಾನೂ ಒಬ್ಬ. ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು ಹೇಗೆ ವರ್ತಿಸಬೇಕು ಎನ್ನುವ ವಿಚಾರ ಅಯಾಯ ಸ್ಥಳ ಮತ್ತು ಸನ್ನಿವೇಶಗಳಿಗೆ ಸಂಬಂಧಪಡುತ್ತದೆ. ಸಾರ್ವಜನಿಕ ಪ್ರತಿನಿಧಿಗಳಿಂದ ಬಂದಿರತಕ್ಕ ವರದಿಗಳನ್ನು ಮತ್ತು ಅಲ್ಲರುವ ಸ್ಥಿತಿಗತಿಗಳನ್ನು ಯೋಚನೆ ಮಾಡಿದ್ದರೆ ಇಂಥ ಉದ್ರೇಕ ಪರಿಸ್ಥಿತಿ ಬರುವುದಕ್ಕೆ ಅವಕಾಶ ಇರುತ್ತಿರಲಿಲ್ಲ ಎಂಬುದು ತಮ್ಮೆಲ್ಲರಿಗೂ ಮನವರಿಕೆ ಆಗಿರತಕ್ಕ ವಿಚಾರ. ಇದಕ್ಕೆ ಸರ್ಕಾರದವರು ಉತ್ತರ ಹೇಳುತ್ತಾರೆಂದು ನಿರೀಕ್ಷಣೆ ಮಾಡುತ್ತಿದ್ದೇನೆ. ಅವರು ಹೇಳುವುದನ್ನು ಮೊದಲೇ ನಿರೀಕ್ಷಣೆ ಮಾಡಿ ಹೇಳುವುದು ಬೇಡ. ಅವರಿಂದ ಉತ್ತರ ಬಂದಮೇಲೆ ಅದರ ಯೋಗ್ಯತೆ ವಿಚಾರ ಮಾಡೋಣ. ಇಂತಹ ನಿಲುವಳಿ ಸೂಚನೆಯನ್ನು ತರಬಾರದು ಎಂದು ವಿರೋಧಮಾಡತಕ್ಕದ್ದು ಸರಕಾರದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂದು ನಾನು ಹೇಳುತ್ತಿದ್ದೇನೆ. ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕ ಪ್ರಮುಖರಿಗೆ ಅನುಮಾನ ಉಂಟಾಗಿರುವಾಗ ಆ ಅನುಮಾನವನ್ನು ಪರಿಹ್ಹರಿಸಿದ ಮಾಡಲು ಚರ್ಚೆಗೆ ಅವಕಾಶ ಕೊಡುವುದು ಸರಿ. ಅನುಮಾನ ಬಂದಮೇಲೆ ಅದನ್ನು ಪರಿಹರಿಸುವುದಕ್ಕೆ ಅವಕಾಶ ಕೊಟ್ಟು ಸರಕಾರದವರು ಸಾರ್ವಜನಿಕ ಹಿತದೃಷ್ಟಿಯಿಂದ ವರ್ತಿಸಿದ್ದಾರೆಂದು ಮನವರಿಕೆ ಮಾಡಿಕೊಡಲು ಈ ವಿಷಯದ ಚರ್ಚೆಗೆ ಅವಕಾಶ ಮಾಡುವುದು ಯೋಗ್ಯ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೇ, ಈ ಸಂಬಂಧವಾಗಿ ನಾನು ಮತ್ತು ಶ್ರೀ ಶರಣಗೌಡರು ರುಜು ಹಾಕಿ ಅವಸರದ ನಿರ್ಣಯವನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಚಿಂತಾಮಣಿಯಲ್ಲಿ ಪೋಲೀಸರ ಗೋಲೀಬಾರಿನಿಂದ ಎರಡು ಜನ ಸತ್ತಿದ್ದಾರೆ. ಅನೇಕರಿಗೆ ಗಾಯಗಳಾಗಿವೆ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ನಷ್ಟವಾಗಿರುವ ವಿಚಾರ ಪತ್ರಿಕೆಗಳ ಮೂಲಕ ನೋಡಿದ್ದೇವೆ. ಇದರ ಬಗ್ಗೆ ಅನೇಕ ಸ್ನೇಹಿತರು ಕಾಗದ ಬರೆದಿದ್ದಾರೆ. ಬರೀ ಚಿಂತಾಮಣಿಯಲ್ಲಿ ಅಷ್ಟೇ ಅಲ್ಲ ಪೋಲೀಸಿನವರು ಎಷ್ಟರಿಕೆ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿರುವುದು. ಇಂತಹ ವಿಚಾರ ಚಿಕ್ಕಮಗಳೂರು, ತುಮಕೂರಿನಲ್ಲಿಯೂ ನಡೆಯಿತು. ಅದುದರಿಂದ ಎಲ್ಲಾ ವಿಷಯ ಗಳನ್ನೂ ಕೂಲಂಕಷವಾಗಿ ವಿಚಾರ ಮಾಡಬೇಕು. ಚಿಂತಾಮಣಿಯಲ್ಲಿ ಗೋಲೀಬಾರಿನಿಂದ ಜನ ಸತ್ತ ತಕ್ಷಣ ಸರಕಾರದವರು ಜುಡಿಷಿಯರ್ ಎನ್‌ಕ್ವೈರಿ ಸಮಿತಿಯನ್ನು ನೇಮಕ ಮಾಡಬೇಕಾಗಿತ್ತು. ಆಗ ಇಂತಹ ಚರ್ಚೆಗೆ ಅವಕಾಶ ಬೇಕಾಗಿರಲಿಲ್ಲ. ಸರಕಾರ ತನ್ನ ಅವಕಾಶವನ್ನು ಉಪಯೋಗಿಸಿ ಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಆ ದೃಷ್ಟಿಯಿಂದ ಇದನ್ನು ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಡ್‌ಜರ್ನ್‌ಮೆಂಟ್ ಮೋಷನ್ ಅಡ್ಮಿಟ್ ಮಾಡಲು ಏನೇನು ಗುಣಗಳು ಇರಬೇಕೆಂದು ರೂಲ್ಸ್‌ನಲ್ಲಿ ಬರೆದಿದ್ದಾರೋ ಆ ಗುಣಗಳು ಎಲ್ಲಾ ಇರುವುದರಿಂದ ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ (ಹರಿಹರ).—ಎರಡು ಮಾತಿನಲ್ಲಿ ಹೇಳುವುದಾದರೆ ಈ ರೀತಿ ಹೊಡೆದಾಟಗಳಲ್ಲಿ ಏರತಕ್ಕ ಬೆರೆಯ ದರವನ್ನು ಇಳಿಸಬೇಕು ಎನ್ನುವ ವಿಚಾರದಲ್ಲಿ ದೇಶದಲ್ಲಿ ಎಲ್ಲಾ ಕಡೆಯೂ ಚಳುವಳಿ ನಡೆದಿದೆ. ಏತಕ್ಕೆಂದರೆ ಇಮರ್ಜೆನ್ಸಿಗೆ ಕನ್ಸ್ಯೂಮರ್ಸ್ ನಾವು ತಿನ್ನತಕ್ಕ ಪದಾರ್ಥಗಳ ಬೆಲೆ ಜಾಸ್ತಿಯಾಗಿ, ಆಕಾರ ದವನಗಳ ಬೆರೆ ಬಿದ್ದುಹೋಗಿರುವುದರಿಂದ, ಅದನ್ನು ಕಡಿಮೆ ಮಾಡಬೇಕೆಂದು ಕೇಳುತ್ತಿದ್ದೇವೆ. ಚಿಂತಾಮಣಿಯಲ್ಲಿ ಈ ರೀತಿ ಒಂದು ಚಳುವಳಿ ಪ್ರಾರಂಭವಾಗುವುದಕ್ಕೆ ಮುಂಚೆ ಸಂಸ್ಥಾನದ ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳು ಚಳುವಳಿಯನ್ನು ಮಾಡಿದ್ದಾರೆ. ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆಯಲ್ಲಿ ವಿದ್ಯಾರ್ಥಿಗಳ ಚಳುವಳಿ ಆಗಿದ್ದು ತಮಗೆ ಗೊತ್ತಿದೆ. ಎಲ್ಲ ಪೋಲೀಸಿನವರು ಸಂಯಮದಿಂದ ವರ್ತಿಸಿದ್ದಾರೋ ಅಲ್ಲ ಬಹಳ ಸುಲಭವಾಗಿ ಯಾವುದೇ ತೊಂದರೆಗಳಿಗೂ ಅವಕಾಶ ಇಲ್ಲದೆ ಈ ಸಮಸ್ಯೆ ಪರಿಹಾರವಾಗಿದೆ. ಆದರೆ ಚಿಂತಾಮಣಿಯಲ್ಲಿ ಹೈ ಹ್ಯಾಂಡೆಡ್ ಎಂದರೆ, ಬಹಳ ಹೆಚ್ಚಿನ ರೀತಿಯಿಂದ ಅತಿರೇಕವಾದ ಬಲವನ್ನು ಪ್ರಯೋಗ ಮಾಡಿ ಅಲ್ಲಿಯ ಜನರಿಗೆ ತೊಂದರೆ ಉಂಟುಮಾಡಿ ನಿರಪರಾಧಿಗಳ ಪ್ರಾಣಗಳನ್ನು

ತೆಗೆದುಕೊಂಡಿರುವುದಲ್ಲದೆ ದೇಶದಲ್ಲಿ ಪರಿಸ್ಥಿತಿಯು ಪ್ರಕ್ಷೋಪಕ್ಕೆ ಹೋಗುವ ಮಟ್ಟಕ್ಕೆ ತಂದಿದ್ದಾರೆ. ಇನ್ನು ಮುಂದೆ ಇಂತಹ ಪ್ರಸಂಗಗಳು ನಡೆಯಬಾರದು. ಆದುದರಿಂದ ಈ ವಿಷಯವನ್ನು ಯೋಚನೆ ಮಾಡಲು ಸರಕಾರದವರು ಈ ನಿಲುವಳಿ ಸೂಚನೆಗೆ ಅನುಮತಿ ಕೊಡುವುದು ಅತಿ ಮುಖ್ಯ ಎಂದು ಹೇಳುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಸದನದ ಮಾನ್ಯ ಸದಸ್ಯರು ಅನೇಕರು ಇತ್ತೀಚೆಗೆ ಚಿಂತಾಮಣಿಯಲ್ಲಿ ಆಗಿರತಕ್ಕಂಥ ಗೋಲೀಬಾರು ಪ್ರಕರಣದ ವಿಷಯವಾಗಿ ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಮತ್ತು ತಮ್ಮ ಮೂಲಕ ಸರ್ಕಾರದಲ್ಲಿ ನಾನು ನಿವೇದಿಸಿಕೊಳ್ಳುವುದೇನೆಂದರೆ ಸಾಮಾನ್ಯವಾಗಿ ನಿಶ್ಯಸ್ತ್ರ ಜನತೆಯ ಮೇಲೆ ಗುಂಡು ಹಾರಿಸಿರತಕ್ಕಂಥ ಕಾನೂನು, ಪದ್ಧತಿ ಅಥವಾ ವ್ಯವಸ್ಥೆ ಅನುಸರಿಸುವ ಸರಕಾರ ಜಗತ್ತಿನಲ್ಲಿ ನಾಗರೀಕ ಸರಕಾರ ಎನ್ನಿಸಿಕೊಳ್ಳುವುದಿಲ್ಲ. ಮಾನ್ಯ ಸದಸ್ಯರು ಅನೇಕರು ಈಗಾಗಲೇ ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಬಂದು ನಿಲುವಳಿ ಸೂಚನೆಯನ್ನು ಒತ್ತಾಯಮಾಡಿದ್ದಾರೆ. ಆಹಾರ ವಸ್ತುಗಳ ಮತ್ತು ಜನಸಿ ವಸ್ತುಗಳ ಬೆಲೆ ಇಳಿದಿರುವಾಗ ಹೋಟೇಲ್ ಮಾಲೀಕರು ತಿಂಡಿತೀರ್ಥಗಳ ಬೆಲೆಯನ್ನು ಕಡಿಮೆ ಮಾಟ್ಟಕ್ಕೆ ಇಳಿಸಬೇಕು ಎನ್ನುವ ಚಳುವಳಿಯನ್ನು ರಾಜ್ಯದಲ್ಲಿ ಎಲ್ಲಾಕಡೆ ಮುಖ್ಯತಃ ವಿದ್ಯಾರ್ಥಿಗಳ ಮೂಲಕ ತಾನೇತಾನಾಗಿ ನಡೆದಿರುವ ಸಂದರ್ಭದಲ್ಲಿ, ಚಿಂತಾಮಣಿಯಲ್ಲಿಯೂ ಕೂಡ ಈ ಚಳುವಳಿ ನಡೆದಾಗ ಪೋಲೀಸಿನವರು—ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದುಕೊಂಡಿದ್ದರೋ, ಪಡೆದುಕೊಂಡಿರಲಿಲ್ಲವೋ ನಮಗೆ ಗೊತ್ತಿಲ್ಲ - ಅರಿಯದೆ ಇರತಕ್ಕ ಜನಗಳಮೇಲೆ ಗುಂಡು ಹಾರಿಸಿ ಮೂರು ಜನರನ್ನು ಕೊಂದು ಹಾಕಿರತಕ್ಕದ್ದು ದುರದೃಷ್ಟಕರ. ಈ ವಿಷಯವನ್ನು ಗಮನಿಸಿ ಈ ನಿಲುವಳಿ ಸೂಚನೆಯನ್ನು ತಾವು ಅಂಗೀಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ನಮಗೆ ಸಾಕಷ್ಟು ಪುರಾವೆಗಳು ಈ ವಿಷಯದಲ್ಲಿ ಇವೆ. ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ನೋಡಿದ್ದೀರಿ ಮತ್ತು ಗೃಹಮಂತ್ರಿಗಳು ಕೂಡ ಒಂದು ರೀತಿ ಸೂಚನೆಯನ್ನು ಅಂಗೀಕಾರ ಮಾಡಿ ಈ ಸದನವು ಈ ವಿಷಯವನ್ನು ಕೂಲಂಕಷವಾಗಿ ಚರ್ಚೆಮಾಡಿ, ಪೋಲೀಸಿನವರೇನಾದರೂ ಹದ್ದುಮೀರಿ ಶಿಸ್ತುಪಾಲನೆ ಮತ್ತು ಸಾರ್ವಜನಿಕ ಶಾಂತಿ ರಕ್ಷಣೆ ಹೆಸರಿನಲ್ಲಿ ಅಧಿಕಾರ ದುರುಪಯೋಗಪಡಿಸಿ ಹೆಚ್ಚು ಅಧಿಕಾರ ಚಲಾಯಿಸಿದ್ದಪಕ್ಷದಲ್ಲಿ ಇದಕ್ಕೆ ನ್ಯಾಯಾಂಗ ವಿಚಾರಣೆ ಆಗಬೇಕು.

ಅವರು ಚಲಾಯಿಸಲಿಲ್ಲ ಎಂದು ಗೃಹಮಂತ್ರಿಗಳು ಹೇಳಿದರೂ ಕೂಡ ನ್ಯಾಯಾಂಗ ವಿಚಾರಣೆ ಆಗಬೇಕು. ಈ ಗೋಳಿಬಾರು ಎಲ್ಲ ರೀತಿಯಿಂದಲೂ ಖಂಡನೀಯ. ಈ ನಿಲುವಳಿ ಸೂಚನೆಯನ್ನು ಒಪ್ಪಿಕೊಂಡು ನ್ಯಾಯಾಂಗ ವಿಚಾರಣೆಗೆ ಸರ್ಕಾರವನ್ನು ಒತ್ತಾಯಪಡಿಸಬೇಕು. ಇದಕ್ಕೆ ತಾವು ಅವಕಾಶ ಕೊಡಬೇಕು ಎಂದು ಹೇಳಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಸಭಾಧ್ಯಕ್ಷರೇ ಈ ಘಟನೆಯ ಬಗ್ಗೆ ಹತ್ತಾರು ನಿಲುವಳಿ ಸೂಚನೆಗಳು ತಮ್ಮ ಗಮನಕ್ಕೆ ಬಂದಿವೆ. ಇದರ ಪ್ರಮುಖತೆ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ, ನಾನು ಈ ಘಟನೆ ನಡೆದ ಪಾರನೆಯ ದಿನ ಚಿಂತಾಮಣಿಗೆ ಹೋಗಿ ಅಲ್ಲಿ ನಡೆದಿರುವ ಅಮಾನುಷ ಪೋಲೀಸ್ ದಬ್ಬಾಳಿಕೆಯನ್ನು ಕಣ್ಣಾರೆ ನೋಡಿ ಬಂದಿದ್ದೇನೆ. ಚಿಂತಾಮಣಿಯ ವಕ್ಕಲಿಗರ ಹಾಸ್ಟಲಿನ ಹುಡುಗರು ಇರುವ ಕೊಠಡಿಗಳಿಗೆಲ್ಲಾ ನುಗ್ಗಿ, ಕಿಟಕಿಯಿಂದ ಕೂಡ ಗೋಳಿಬಾರು ಮಾಡಿದ್ದನ್ನು ನೋಡಿದ್ದೇನೆ. ಅಷ್ಟೇ ಅಲ್ಲ ರೂಮು ಬಾಗಿಲುಗಳನ್ನು ದೊಡ್ಡ ದೊಡ್ಡ ಕಲ್ಲುಗಳಿಂದ ಹೊಡೆದು ಬಾಗಿಲುಗಳನ್ನು ಮುರಿದು ಹಾಕಿದ್ದಾರೆ. ಈ ದಬ್ಬಾಳಿಕೆ ಪೋಲೀಸ್‌ನವರದು ಮಾತ್ರವೇ ಅಲ್ಲ ಇದರಲ್ಲಿ ಸ್ಥಳೀಯ ಕಾಂಗ್ರೆಸ್‌ನವರ ಕೈವಾಡ ಕೂಡ ಇದೆ. ಚಿಂತಾಮಣಿಯ ಸ್ಥಳೀಯ ಕಾಂಗ್ರೆಸ್‌ನವರೂ ಕೂಡ ಘಟನೆಗೆ ಕಾರಣರಾಗಿದ್ದಾರೆ. ಕಾಂಗ್ರೆಸ್ಸಿನವರ ಸಂಘಾನಕ್ಕೆ ಅವಕಾಶ ಕೊಡದೆ ಕೆಲವು ಹೋಟೇಲ್ ಮಾಲೀಕರನ್ನು ಎತ್ತಿಕಟ್ಟಿ ಇಂತಹ ಪರಿಸ್ಥಿತಿಗೆ ದಾರಿ ಮಾಡಿದರು. ಅಲ್ಲದೆ ಎರಡು ಸಾವಿರ ಜನರ ಗುಂಪು ಕೂಡ ಇಲ್ಲದೆ ಇದ್ದುದರಿಂದ ಗುಂಡು ಹಾರಿಸದೆ ಪರಿಸ್ಥಿತಿಯನ್ನು ಹತೋಟಿಗೆ ತರಬಹುದಾಗಿತ್ತು. ಅವರನ್ನು ಹೊಡೆಯುವುದಕ್ಕೆ ಮತ್ತು ರಾಜಕೀಯ ಹಿನ್ನೆಲೆಯಿಂದ ಇಲ್ಲಿ ಜನರನ್ನು ಹೆದರಿಸುವುದಕ್ಕೆ ನಮಗೆ ಪೋಲೀಸರ ಸಹಾಯ ಇದೆ ಅವರ ಸಹಾಯದಿಂದ ಯಾರನ್ನು ಬೇಕಾದರೂ ತಡೆಯುವುದಕ್ಕೆ ಶಕ್ತಿ ಇದೆ ಎಂಬುದನ್ನು ತೋರಿಸುವುದಕ್ಕೆ ಸಿಂಡಿಕೇಟ್ ಸರ್ಕಾರದವರು ಮತ್ತು ಸಿಂಡಿಕೇಟ್ ಕಾಂಗ್ರೆಸ್‌ನವರು ಮತ್ತಷ್ಟು ಪೋಲೀಸ್‌ನವರನ್ನು ಕರೆಸಿಕೊಂಡು ದಬ್ಬಾಳಿಕೆ ನಡೆಸಿದ್ದಾರೆ.

Mr. SPEAKER.—Expression like syndicate and indicate may be avoided.

ಶ್ರೀ ಪಿ. ವೆಂಕಟಗಿರಿಯಪ್ಪ.— ಕೋಲಾರ ಜಿಲ್ಲೆಯಲ್ಲಿ ವಿದುರಾಶ್ವತ್ಥ ಘಟನೆಯಾದಮೇಲೆ ಇಂತಹ ರೀತಿಯ ಅತ್ಯಾಚಾರ ಯಾವತ್ತೂ ನಡೆದಿಲ್ಲ. ಕೆ. ಜಿ. ಎಫ್.ನಲ್ಲಿ ಬೇಕಾದಷ್ಟು ಸಲ ಗಲಾಟೆಯಾಗಿದ್ದರೂ ಕೂಡ ಈ ರೀತಿಯಾಗಿರಲಿಲ್ಲ. ಇದರಲ್ಲಿ ರಾಜಕೀಯ ಇದೆ. ಆದ್ದರಿಂದ ಈ ನಿಲುವಳಿನೂಚನೆಗೆ ಖಂಡಿತವಾಗಿಯೂ ಅವಕಾಶ ಕೊಡಬೇಕು. ಅವಕಾಶ ಕೊಡದೇ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಬಾರದು ಎಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳಿ ಕೊಳ್ಳುತ್ತೇನೆ.

Sri VEERENDRA PATIL (Chief Minister).—Sir, it is regretable that on 16th January 1970, the police had to open fire... .....

Sri H. N. NANJE GOWDA.—I rise to a point or order Sir. Sir in the list of Business, there is no calling attention notice under rule 63. Now we have given notice of a motion under rule 50 and I am one of the signatories to that notice. In fact, I got up very early.

Mr. SPEAKER.—The Hon. Member did not rise. If he had risen. I would have permitted him also to speak.

Sri H. N. NANJE GOWDA.—The Hon. Chief Minister is trying to read a statement given by the Secretary or the Police Department. We know definitely, as our elder Member Sri H. M. Channabasappa put it earlier, the Chief Minister is going to say that he would ascertain and say many things. Any statement of that kind is premature at this stage, because it would prejudice any decision that this House may ultimately take on the motion. ಮುಂಬೆ ಮಧುಗಿರಿ ಸಂದರ್ಭದಲ್ಲಿ ಅಂತಹ ರೀತಿಯಲ್ಲಿ ಆ ಒಂದು ಪರಿಸ್ಥಿತಿ ಇರಲಿಲ್ಲ ಆದ್ದರಿಂದ ನ್ಯಾಯಾಂಗ ವಿಚಾರಣೆಯಾಗಬೇಕಾದ ಸಂದರ್ಭ ಇಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದೇ ಆದರೆ ಇಂತಹ ವಿಚಾರಣೆ ನಡೆಸತಕ್ಕ ಕಾರ್ಯಕ್ಕೆ ಅಡ್ಡಬರತಕ್ಕ ಸಂದರ್ಭವುಂಟಾಗುತ್ತದೆ. ಆದ್ದರಿಂದ ಅವರು ತಮ್ಮ ಸ್ಟೇಟ್‌ಮೆಂಟನ್ನು ಓದುವುದಕ್ಕೆ ತಾವು ಅವಕಾಶವನ್ನು ಕೊಡುವುದು ಅಪ್ರಕೃತ. ರೂಲ್ 50ರ ಪ್ರಕಾರ ನಾವು ಈ ನೂಚನೆಯನ್ನು ಕಳುಹಿಸಿದ್ದೇವೆ. ಸರ್ಕಾರದವರ ವಾದವನ್ನು ಕೇಳಬಹುದು, ಅದನ್ನು ಕೇಳಿ ಉತ್ತರ ಕೊಡುವವರು ತಾವು. ಸಬ್ ಇನ್‌ಸ್ಪೆಕ್ಟರು ಮಾಡಿಸ್ಟ್ರೇಟರು ಸ್ಥಳದಲ್ಲಿ ಇಲ್ಲದೇ ಇರತಕ್ಕ ಕಾಲದಲ್ಲಿ ಯಾವ ಪ್ರೊವೊಕೇಷನ್ ಇಲ್ಲದೆ, ಮತ್ತು ವಾರ್ನಿಂಗ್ ಕೂಡ ಕೊಡದೆ ಗೋಲಿ ಪ್ರಯೋಗ ಮಾಡಿರುವುದನ್ನು ಈ ಸಭೆ ಸಹಿಸುವುದಕ್ಕೆ ಅಸಾಧ್ಯವಾದ ಸಂಗತಿ. ಹಿಂದೆ ಮಧುಗಿರಿ ಪ್ರಕರಣದಲ್ಲಿ ಗೃಹಮಂತ್ರಿಗಳಾಗಿದ್ದ ರಾ ಮಿನಿಸ್ಟರು ರಾಜೀನಾಮೆ ಕೊಟ್ಟರು, ಅದಕ್ಕಾಗಿ ನಾವು ಅವರನ್ನು ವಂದಿಸಬೇಕು. ಇವತ್ತು ಗೃಹಮಂತ್ರಿಗಳು ಪೋಲೀಸ್ ರಿಪೋರ್ಟ್‌ನ್ನು ನಮ್ಮ ಮುಂದಿಡುವುದಾದರೆ ಅದನ್ನು ಕಾಲ್ ಅಟೆನ್‌ಷನ್ ನೋಟೀಸ್ ಬಂದಾಗ ಅದಕ್ಕೆ ಉತ್ತರವಾಗಿ ತಿಳಿಸಬಹುದು. ಆದ್ದರಿಂದ ರೂಲ್ 50 ರ ಪ್ರಕಾರ ಗೃಹ ಮಂತ್ರಿಗಳು ಸ್ಟೇಟ್‌ಮೆಂಟ್ ಓದುವುದಕ್ಕೆ ಅವಕಾಶ ಕೊಡಕೂಡದು, ಅದು ನಿಯಮಬದ್ಧವಾಗುವುದಿಲ್ಲ ಎಂದು ಹೇಳುತ್ತೇನೆ. It would not be in order. That is my point of order Sir.

Sri D. DEVARAJ URS.—In support of what Sri H. N. Nanje Gowda said, I would like to say this: You were pleased to ask the Chief Minister to make a statement.

Mr. SPEAKER.—I shall explain the position. After hearing what the Hon. Member wanted to say on this matter, I wanted to hear the view of the Government also on this point. When any important matter comes up before the House, in all the Legislative bodies including the Lok Sabha, the Presiding Officer usually calls upon the Government also to make a statement in the House, so that he may have all the material before him to take a corrent decision. Therefore, I rule there is no

point of order. I call upon the Hon. Chief Minister to proceed with his statement.

ಶ್ರೀ ಬಿ. ಪಿ. ಗಂಗಾಧರ್.—ನಭೆಯ ಮುಂದೆ ಇರುವುದು ಎರಡು ವಿಷಯ. ಒಂದು ಕಾಲ್ ಅಟೆನ್‌ಷನ್ ನೋಟೀಸ್, ಇನ್ನೊಂದು ಬೇರೆಯಾಗಿದೆ. ಅದು ಈ ರೀತಿ ಇದೆ:—

Under Rule 63, a member may, with the previous permission of the Speaker, call the attention of a Minister to any matter of urgent public importance and the Minister may make a brief statement or ask for time to make a statement at a later hour or date. Rule 50 reads:

> "Subject to the provisions of these rules, a motion for an adjournment of the business of the Assembly for the purpose of discussing a definite matter of urgent public importance may be made with the consent of the Speaker.

Rule 52 reads: "The right to move the adjournment of the Assembly for the purpose of discussing a definite matter of urget public importance shall be subject to the following restrictions, namely:

(i) not more than one such motion shall be made at the same sitting;

(ii) not more than one matter shall be discussed on the same motion;

(iii) the motion shall be restricted to a specific matter of recent occurrence;

(iv) the motion shall not raise a question of privilege;

(v) the motion shall not revive discussion on a matter which has been discussed in the same session;

(vi) the motion shall not anticipate a matter which has been previsously appointed for consideration....."

MR. SPEAKER.—I know the rules. I am simply asking the Chief Minister whether he wants to say anything regarding the adjourment motion. Before I take a decision on the motion, I must hear both sides. It should not be construed that the Hon. Chief Minister is making a statement in reply to a calling attention notice. I am fully aware of that position. There is no point of order.

2-30 P.M.

†SRI D. DEVARAJ URS.—Under Chapter VIII, the motion has been raised. An adjournment motion is tabled under Rule 50, which says, that the motion may be made with the consent of the Speaker. Now you are pleased to call upon the Hon. Chief Minister to make a statement or to give whatever explanation he wants on behalf of the Government. My point is this: When you asked us to explain the reason for allowing this motion, we merely stated the reasons with relevant rules in brief, governing the motion which has to be admitted here in preference to other items of business. Mind you, we have not

(SRI D. DEVARAJ URS)

gone into what we propose to say on this matter. I feel under Chapter VIII, the rules say as to how an adjournment motion should be made, what the matter for the motion should be and whether that matter is of urgent public importance or not. Beyond that, if the Hon. Chief Minister were to answer all the issues raised here, it would not be proper. We have not said anything at all with regard to what has happened there. So in anticipation, merely reading the statement which he gets from the Home Secretary is not the point at issue. At any rate, this is not the stage for the Hon. Chief Minister to simply read a statement as to what has happened or what has not happened there because he has not heard us at all on this incident. We are merely pleading before this House why this motion should be admitted. Only on these points—whether the motion does not relate to a matter of public importance, whether it is not important, whether it is not urgent, if the Hon. Chief Minister were to confine his remarks, we have no objection. Otherwise, if he is permitted to make a statement by way of reply to the points raised, I am sorry to state that we have not raised any points; we have not discussed the subject at all. We purposely did not go into the details of what has happened there. We have no objection if the hon. Chief Minister were to speak about the admissibility according to rules. He cannot go into t..e merits or demerits of the subject anticipating what we are going to say. Let him do it after a full debate. According to the Rule, your consent is necessary for the motion and we appeal to you to give your consent.

SRI M. S. KRISHNAN.—On a point of order. I am not going to repeat what Sri Devaraj Urs stated. I slightly differ from what he stated. You have to be concerned only with two points: firstly whether the rules have been followed by us in tabling this motion, and secondly whether on that basis, you can give your consent. At this stage, you cannot call those members who have not given notice of the adjournment motian to Speak. So the question of calling upon the Hon. Chief Minister or any other Minister to make a statement does not arise according to the scheme of things. But Sri Devaraj Urs stated that if the Hon. Chief Minister wants to have his say on the matter whether it is of urgent public importance he had no objection. There I disagree with him. For heaven's sake, don't call upon any body and everybody to speak; it is against the scheme of things. If you call upon the Hon. Chief Minister now to speak, it goes against the grain and spirit of the rules.

SRI D. M. SIDDAIAH.—My hon. friend Devaraj Urs presumed what the Hon. Chief Minister was going to say. After all, we do not know what the Chief Minister is going to say; but he has agreed that he has no objection to the Hon. Chief Minister making a statement without going into the merits.

Sri D. DEVARAJ URS.—My point is that the hon. Chief Minister can only say whether the motion is admissible or whether it is against the rules.

Sri D. M. SIDDAIAH.—We do not know what the Hon. Chief Minister is going to say. How can he presuppose his arguments before he hears him ?

Sri H. SIDDAVEERAPPA.—If the Hon. Chief Minister were to enter into merits, we will have to take objection.

† ಶ್ರೀ ಎಸ್. ಗೋಪಾಲ ಗೌಡ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಓದಲು ಪ್ರಾರಂಭಿಸಿದಾಗ ಸ್ವಾಭಾವಿಕವಾಗಿ ನಿಲುವಳಿ ಸೂಚನೆಯನ್ನು ಕಳುಹಿಸಿದಂಥ ಮತ್ತು ಅದಕ್ಕೆ ಬೆಂಬಲ ನೀಡಿದಂಥ ಸದಸ್ಯರಿಗೆ ಉಂಟಾದ ಕಳವಳವೇನೆಂದರೆ ಗಮನ ಸೆಳೆಯುವ ಸೂಚನೆಯ ರೀತಿಯಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ವಿಷಯವನ್ನು ಏನಾದರೂ ಕುರಿತು ವಿವರಗಳನ್ನು ನೀಡಿದ ನಂತರ ನಿಲುವಳಿ ಸೂಚನೆಗೆ ಅವಕಾಶವೇ ಇಲ್ಲ ಎಂದು ಅಭಿಪ್ರಾಯವನ್ನು ಕೊಟ್ಟ ಪಕ್ಷದಲ್ಲಿ ನಿಲುವಳಿ ಸೂಚನೆಯನ್ನು ತಾವು ಅಂಗೀಕಾರ ಮಾಡುವುದಕ್ಕೆ ತೊಂದರೆಯಾಗುತ್ತದೆ ಎನ್ನುವ ಒಂದು ಭಯದಿಂದ ಶ್ರೀಮಾನ್ ನಂಜೇಗೌಡರು ಕ್ರಿಯಾಲೋಪವನ್ನು ಎತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸರ್ಕಾರಿ ನೌಕರರು ಕೊಟ್ಟಿರುವ ವರದಿಯನ್ನು ಇಲ್ಲಿ ಓದುತ್ತಾರೆ. ಕೇಸು ಕೋರ್ಟಿಗೆ ಹೋದರೂ ಕೂಡ ಪ್ರಿಜುಡಿಸ್ ಆಗುತ್ತದೆ ಎನ್ನುವ ಕಾರಣಕ್ಕಾಗಿ, ತಾವು ಗಮನಿಸಿಬಹುದು, ಇತ್ತೀಚೆಗೆ ನಾನು ಕಾರ್ ಅಚೆನ್‌ಷನ್ ಮೋಷನ್ ಕೊಡದೆ ಇರುವುದು. ಅದು ನಮಗೆ ಗೊತ್ತಿರುವ ವಿಷಯ. ಆದುದರಿಂದ ನಾನು ತಮಗೆ ನಲಹೆ ಕೊಡುವುದಕ್ಕೆ ಇಷ್ಟ ಪಡುವುದಿಲ್ಲ, ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ 50ನೇ ನಿಬಂಧನೆಯ ಮೇರೆಗೆ ನಿಲುವಳಿ ಸೂಚನೆಯನ್ನು ಆಡ್ಮಿಟ್ ಮಾಡಬೇಕೋ ಬೇಡವೋ ಎನ್ನುವ ವಿಷಯವನ್ನು ಕುರಿತು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಈ ವಿಷಯ ತುರ್ತಾದುದೇ, ಸಾರ್ವಜನಿಕ ದೃಷ್ಟಿಯಿಂದ ಕಾರ್ಯಕಲಾಪವನ್ನು ಸ್ಥಗಿತಗೊಳಿಸಿ ಚರ್ಚೆಗೆ ಅವಕಾಶ ಕೊಡಬೇಕಾದಂಥ ಪ್ರಾಮುಖ್ಯವಾದ ವಿಷಯವೇ, ಎನ್ನುವುದನ್ನು ನಾವು ವಿಚಾರ ಮಾಡಬೇಕು, ಆ ವಿಷಯವನ್ನು ನಾವು ಗಮನಿಸಬೇಕು. ಅವಿಲ್ಲದೆ ಇದ್ದರೆ ಒಂದು ವೇಳೆ ಮಾನ್ಯ ಮುಖ್ಯ ಮಂತ್ರಿಯವರಾಗಲೀ, ಶ್ರೀಮಾನ್ ಡಿ. ಎಂ. ಸಿದ್ದಯ್ಯನವರಾಗಲೀ, ಮತ್ತೆ ಯಾರಾದರೂ ಸದಸ್ಯರೇ ಆಗಲೀ ನಿಲುವಳಿ ಸೂಚನೆಯು ಅಗತ್ಯತೆ ಈಗ ಕಂಡುಬರುವುದಿಲ್ಲ ಎಂದು ಹೇಳಿದ ಪಕ್ಷದಲ್ಲಿ, ತಾವು 'ಒಪ್ಪುವ ಸದಸ್ಯರುಗಳು ತಮ್ಮ ಸ್ಥಾನಗಳಲ್ಲಿ ಎದ್ದು ನಿಂತುಕೊಳ್ಳಬೇಕು' ಎಂಬುವಾಗಿ ಅಪೇಕ್ಷಿಸತಕ್ಕುದು.

ಅಧ್ಯಕ್ಷರು.—ಅದು ಸಬ್‌ಸೀಕ್ವೆಂಟ್ ಸ್ಟೇಜಿನಲ್ಲಿ ಬರುತ್ತದೆ, ಈಗ ಬರುವುದಿಲ್ಲ.

ಶ್ರೀ ಗೋಪಾಲ ಗೌಡ.—ಈ ಸ್ಟೇಜಿನಲ್ಲಿ ಕಾರ್ ಅಚೆನ್‌ಷನ್ ಮೋಷನ್ ಎಂದು ಅನಿರೀಕ್ಷಿತವಾಗಿ ಮಾನ್ಯ ಮುಖ್ಯ ಮಂತ್ರಿಯವರು ಸರ್ಕಾರದ ಪರವಾಗಿ, ಅವರೇ ಗೃಹ ಮಂತ್ರಿಗಳೂ ಆಗಿರುವುದರಿಂದ, ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿ ಪ್ರಸ್ತಾಪ ಮಾಡಿದರೆ ಅದು ಕ್ರಿಯೊಲೋಪವಾಗುತ್ತದೆ.

Mr. SPEAKER.—The point is this. The hon. Members who spoke in support of the motion referred to certain facts and urged upon me to admit the motion because it is of an urgent nature and it fulfils the conditions laid down in the rules. Now if the other side wants to oppose the motion without going into the merits or demerits of the motion should we not hear them ? I have to follow a certain procedure. The fear expressed by the hon. Member Sri S. Gopala Gowda is not well founded. I shall decide the matter strictly in accordance with the rules. I would like to hear the Chief Minister. If the Chief Minister wants to oppose the motion and refer to certain points as to why he opposes it, it is open to him to do so.

Sri K. H. PATIL.—I submit that the hon. Speaker cannot call particularly the Chief Minister to say a few words on this subject because it is the members who have raised the issue. The very fact you have heard patiently and your inclination to call the Chief Minister to speak, shows that prima facie you have admitted the motion.

Mr. SPEAKER.—Hon. Member's inference is incorrect.

Sri K. H. PATIL.—If that is not the case, if you were not convinced you could have straightaway said there is no need to admit the proposal. If you want to allow all the hon. members to speak, please don't give priority to any member. You seem to give more importance to Chief Minister who has nothing to do other than any minister here, unless the motion is admitted. If you admit the motion, then he will have to represent the Government and say something. Otherwise, it is not correct. Therefore, I appeal to the Speaker not to name the Chief Minister to say something. You can say that if any members on the other side wants to say anything, they can do so. Otherwise the spirit of the rule will be defeated. That is my submission.

Sri H. SIDDAVEERAPPA.—You can put an end to this if you kindly guide the Leader of the House stating that his remarks, if any, may be limited to the technical grounds as have been raised.

Mr. SPEAKER.—I should be fair to everybody. I cannot take sides. If the hon. Member wants to speak of urgency, certain references have got to be made.

Sri H. SIDDAVEERAPPA.—The facts will have to be confined only to this question-whether there was a firing in Chintamani and whether there were deaths-and not say anything in excess as to whether there was provocation and all that.

Mr. SPEAKER.—Any member of the Government may do it.

Sri M. NAGAPPA.—On a point of order.

Mr. SPEAKER.—Shall we apply our mind to the business before the House?

Sri H. N. NANJE GOWDA.—Sir, we are discussing some matters under rules. If the Chair remarks that we can mind the business, may I know whether what we are discussing is not a business.?

Mr. SPEAKER.—I have been hearing points of order wherein points have been repeated. There is a ruling that repetition of points of order cannot be allowed. The hon. Member must remember that the right of point of order should not be abused. It is perfectly a good statement.

Sri M. NAGAPPA (Raichur).—Just now the hon. Speaker was pleased to explain the rules laid down in Chapter 8. It has been said that the Chief Minister is going to raise an objection for the motion to give consent. I humbly submit that rule 54 (2) is important. The sub-rule (2) will come into operation when a consent is given and a

member is called to seek leave of the House. If leave is got by any member of the House, then the question of taking vote and other things arise. If you kindly read the proviso to rule 54 you will see that if consent is refused or if the matter to be discussed is not in order, the Speaker will read the notice of motion and it is to be recorded. Therefore, if the hon. Chief Minister is called to answer and give reply without any such situation arising, I think the proviso to rule 54 and rule 54 (2) will be contravened. Therefore, I submit that if the hon. Speaker is going to decide on the merits, I think as a mover of the adjournment motion who has given first notice, I may be permitted to read my notice. I think the question of objection does not arise. If you are going to reject, it is a different matter. If you are going to allow members to ask leave for moving the motion, then the question of objection would come. I submit that I may be permitted to read the notice now or whenever the Speaker deems fit.

Mr. SPEAKER.—The question does not arise. I shall reply to that point.

†Sri H. M. CHANNABASAPPA.—In regard to that point I would like to add one word. There appears to be some force in what the hon. Member Sri Nagappa has said. To give consent to an adjournment motion or not, is well within your powers. If you are satisfied that the adjournment motion answers all the requirements, then it is for you to give consent. It is only when objection is raised to giving consent to the adjournment motion, the matter will have to be looked into in pursuance of rule 54 (2). In regard to giving of consent, it is exclusively within your power and all that is required on our part to establish, is that it is a prima facie urgent matter, that it is a very serious matter of public importance required to be discussed by this House adjourning all other businesses. Therefore, urgency importance and public importance are the only three things to be established by us and once these things are firmly established it is for you to give consent or not. If anybody wants to raise an objection, it shall be only under Rule 54 (2) and so it is not open to anybody to raise objection unless it be under Rule 54 (2). If at all the Chief Minister wants to say anything, he might enlighten us on the matter of admissibility and other things of the kind. Therefore, I would submit that there is some force in what the hon. Member Sri Nagappa has said in his point of order. So it is better that your goodself will apply your mind and give us a ruling.

Mr. SPEAKER.—I have heard the point of order raised by the hon. Member Sri Nagappa and very powerfully supported by the hon. Member Sri Channabasappa. The position is very clear. Rule 54 (2) comes into operation after consent is given and not prior to that. Now the question is whether I should give consent or not and that will have to be considered under Rules 50, 51 and 53. Rule 54 does not come in now. As a person sitting in a semi-judicial capacity, when I have heard members who want to persuade me to give consent, I should also give an

(MR. SPEAKER)

opportunity to those who want to oppose consent being given. If the Chief Minister wants to oppose I shall hear him as to why he wants that consent should not be given. The question of granting leave comes in after consent is given and not earlier. I want to hear the Hon. leader of the house now on the point whether to give consent or not.

Sri H. SIDDAVEERAPPA.—The Leader of the House has not said that he is going to oppose.

Mr. SPEAKER.—Let us hear what the Hon. leader of the House wants to say. He has indicated to me that he wants to oppose consent being given and so I am permitting him.

Sri AZEEZ SAIT.—Before the Chief Minister says what he wants to say, I want to add one thing. Your calling upon the Chief Minister has created an apprehension in our minds. Rules 50 to 54 are crystal clear and do not leave any room for any doubt and so I do not think there is any necessity for the Chief Minister to come into the picture now, unless it be under Rule 54(2). Even granting that his objection is under Rule 54(2), you have got to call upon members who are in favour of leave being granted to stand in their seats. Without doing that, when you call upon the Chief Minister to raise his objection; it raises an apprehension in our minds. Of course, today power may be in their hands. But the matter cannot be hushed up like this under technicality of the rules. The Rules are there for both the sides.

†Sri VEERENDRA PATIL— Sir, under Rule 306, with the permission of the Chair, Government has got the option of making a statement. In this connection, I do not know whether the House wants to know the facts of the case. If the House is not interested in knowing the facts of the case, I am not anxious to make a statement about it.

Sri H. SIDDAVEERAPPA.—Not at this stage, Sir,

Sri VEERENDRA PATIL.—At this stage I do not give out the facts of the case. That is why I said I am not anxious to give out the facts of the case. I got the impression that Members are anxious to know the facts of the case and the compelling circumstances that led to the firing and that is why I wanted to make the statement, but now that they say that at this stage they are not anxious to know the facts. I also say that I am not anxious to give the facts. I will leave out that portion.

With regard to the question whether consent should to given to this adjournment motion or not, I may be permitted to say a few words. It is a long established precedent that matters relating to law and order do not form the subject matter of adjournment motions. Moreover, the debate on the Motion of Thanks to the Governor's Addrets is put down in the agenda for today and I submit that the subject matter of this adjournment motion could be debated on that occasion.

It is laid down by a series of rulings that when an early parliamentary opportunity is available to debate a matter, then it cannot form the basis of an adjournment motion. There is no urgency involved since what is sought to be discussed is something that has already happened and therefore there is nothing that has to be done now except to have a debate about the circumstances which led to the unfortunate incident. Therefore I feel there is no case for adjourning the business for the day. Immediately after passing the resolution to ratify the Constitution (Amendment) Bill passed by Parliament we are going to discuss the Motion of Thanks and at that time every member will have ample opportunity to discuss this subject and then at the end I will be in a position to reply to the debate. Therefore when there is an opportunity to discuss this matter, I do not think it necessary for you to adjourn the business put down for the day. I, therefore, submit that the adjournment motion may not be given consent to.

Sri H. SIDDAVEERAPPA.—I am sorry the Chief Minister has not understood the rules strictly. Whatever has to come, must come within the orbit of rules 50 to 53 In the first instance he cannot begin to postulate that there is another opportunity for members in the discussion on the motion of thanks to the Governor's Address. The discussion on the motion of thanks to the Governor's Address may be there, but we want to highlight this matter and so what is required is to see whether this adjournment motion conforms to rules 50 to 53. The Chief Minister should have confined his remarks to that and taken objection, but I am sorry he did not do so. He merely said that members will have ample opportunities to discuss this matter. Rules 50 to 53 are very clear and we should confine our attention to them and see whether the present adjournment motion is on all fours with what is laid down in the rules. The Leader of the House has not met these points. Therefore, I am appealing to you, Sir, to consider this because this is a very vital matter and we want to highlight it because there is so much of feeling in the State about it. What happened in Lok Sabha ? They could have said that this is something which could be discussed in connection with the debate on the President's Address. What I want to say is that these Rules should not become a dead letter.

3-00 P.M.

ಶ್ರೀ ಎಸ್. ಗೋಪಾಲಗೌಡ.—ಸ್ವಾಮೀ, ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿರುವುದರ ಜೊತೆಗೆ ಒಂದು ಮಾತನ್ನು ಇಲ್ಲಿ ಸೇರಿಸಲು ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಪ್ರಕಾರ ಇಲ್ಲಿ ತಂದಿರುವ ತಿರುವಳಿ ಸೂಚನೆಯನ್ನು ತಾವು ತಳ್ಳಿಹಾಕುವುದಕ್ಕೆ ಸಾಧ್ಯವಿಲ್ಲ. ಆದರೆ ಈಗಾಗಲೇ ಈ ಪ್ರಕರಣದ ಬಗ್ಗೆ ಸರ್ಕಾರ ನ್ಯಾಯಾಂಗ ವಿಚಾರಣೆ ನಡೆಸಿದೆಯೇ ಎನ್ನುವುದು ಒಂದು ಮಾತು. ಇನ್ನೊಂದು ಮಾತು ನ್ಯಾಯಾಧೀಶರನ್ನು ನೇಮಕ ಮಾಡಿ ಅಪರಾಧಿಗಳನ್ನು ಬಂಧನದಲ್ಲಿಟ್ಟಿದ್ದರೇ ಎನ್ನುವುದು ಈಗಾಗಲೇ ಇದು ನ್ಯಾಯಾಧೀಶರ ತನಿಖೆಗೆ ಒಳಪಟ್ಟಿದ್ದರೆ ಇಲ್ಲಿ ಇಂತಹ ತಿರುವಳಿ ಸೂಚನೆಯನ್ನು ತರಲು ತಾವು ಅವಕಾಶ ಕೊಡದೇ ಇರಬಹುದು.

Mr. SPEAKER.—Is there any enquiry?

Sri K. H. PATIL.—Are we to make out a case? I expect the Hon'ble Speaker to be the custodian of the House.

Mr. SPEAKER.—Hon. Member Sri Gopala Gowda wanted to know whether there was any enquiry and I am just passing the same question to the Chief Minister. Let him say whether there is any enquiry at all?

Sri H. N. NANJE GOWDA.—May I bring to your kind notice Sub-Rule (vii) of Rule 52? That sub-rule (vii) says as follows:

> "The motion shall not deal with any matter which is under adjudication by a Court of Law having jurisdiction in any part of India."

If the Government was of the opinion that it was not under adjudication, the Chief Minister or any other Minister have no right to refer this matter. The Hon. Speaker need not give incentive to the Chief Minister to plead that there is one more point.

Mr. SPEAKER.—You are making a damaging statement. Hon. Member Sri Gopala Gowda wanted some information and I am seeking that information. Is there any enquiry?

Sri VEERENDRA PATIL.—There is. Eleven cases have been registered under Section 147, 324 and 432 of I. P. C. Thirteen persons have been arrested and investigation is under progress.

Sri H. SIDDAVEERAPPA.—We have been asking whether there was an enquiry in the matter. What Sri Gopala Gowda referred was whether it is under adjudication and whether there was a judicial enquiry. What the Chief Minister said was that it is under official enquiry, and the Police have registered some cases. The rule is very clear "which is under adjudication by a Court of Law". Does the Police enquiry constitute a Court of law? So, whatever information he has given, and whatever arguments he has advanced, they do not come under these rules. Now it is for the Speaker to give his ruling.

Sri M. NAGAPPA.—There are two points here to be considered. There is already a precedent in this House with regard to Madhugiri and the same facts and figures were there. The Speaker was pleased to allow the subject to be discussed in the House. The second point is the date is fixed for the discussion of the address made by the Governor. Now let us see the rule 21 (3). It reads as follows:

> "The discussion on the Address shall be interrupted in the course of a sitting by an adjournment motion under rule 50."

Therefore this point holds good. The point here is that there is no matter pending before the judicial authority. Only F. I. R. might have been filed. It cannot be considered as Sub Judice unless a charge-sheet is filed. To this point the Chief Minister has not taken any objection. I submit that there is a point in admitting and giving consent for the adjournment motion. Therefore, I submit the consent may be given to this.

Mr. SPEAKER.—I heard the different arguments of the hon. Members. At the outset I may tell the Hon'ble members that I have got every sympathy for the persons who have suffered in the firing. In this particular matter of giving consent, the Hon Members wanted me to be guided by rules. I am always guided by rules and accepted parliamentary conventions. I draw the attention of the hon. Members to Rule 52 Clause (vi). It reads as follows:

> "The motion shall not anticipate a matter, which has been previously appointed for consideration. In determining whether a discussion is out of order on the ground of anticipation, regard shall be had by the Speaker to the probability of the matter anticipated being brought before the Assembly within a reasonable time."

The rule says that if, there are other opportunities to discuss the matter concerning the adjournment motion, be allowed. In other words the time of the House should be very economically used.

Sri P. VENKATAGIRIYAPPA.—It is not proper to treat people like this. The people are not beasts. The Hon. Speaker should be impartial ಮನುಷ್ಯರ ಪ್ರಾಣ ಕೂಡ ಬಹಳ ಮುಖ್ಯವಾದದು.

Mr. SPEAKER.—When there is alternative opportunity, I think, the adjournment motion should not be permitted.

ಶ್ರೀ ವಾಟಾಳ್ ನಾಗರಾಜ್.—ಸ್ಪೀಪು, ತಾವು ಪುಸ್ತಕದಲ್ಲಿರುವ ರೂಲ್ಸ್‌ನ್ನು ನೋಡಬೇಡಿ.

Mr. SPEAKER.—That is not the way of doing things.* * * * The time of the House has got to be usfully and economically used. The time for debate on motion of thanks to the Governor's Address is already fixed. The hon. members may take that opportunity to agitate this point. I am therefore sorry I cannot give my consent to this motion.

ಶ್ರೀ ಎನ್. ಶಿವಪ್ಪ.—ಸ್ಪೀಪು, ವಿರೋಧಪಕ್ಷದ ಬಹುಮತವನ್ನು ಅಲಕ್ಷಿಸಿ ಈ ಅವಸರದ ನಿರ್ಣಯವನ್ನು ಅಗತ್ಯವಿದ್ದರೂ ಕೂಡ ಚರ್ಚೆ ಮಾಡಲು ಅವಕಾಶ ಕೊಡದೆ ಇರುವುದು ಪ್ರಜಾ ಪ್ರಭುತ್ವದ ಬೆಳವಣಿಗೆಗೆ ಒಳ್ಳೆಯದಲ್ಲ. ನಮ್ಮ ಕಣ್ಣೆದುರಿಗೆ ನಡೆದಿರುವಂಥ ದುರ್ಘಟನೆಗಳ ಬಗ್ಗೆ ಚರ್ಚೆ ಮಾಡಲು ಒಂದು ಅವಸರದ ನಿರ್ಣಯವನ್ನು ಕಳಿಸಲಾಗಿತ್ತು. ಅದಕ್ಕೆ ತಾವು ಅವಕಾಶ ಕೊಡದಿದ್ದರೆ ಈ ಶಾಸನಸಭೆ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡಿದಂತಾಗುವುದಿಲ್ಲ. ಆದಳಿತ ಪಕ್ಷದ ಈ ನೀತಿಯನ್ನು ವಿರೋಧ ಪಕ್ಷದವರು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(Opposition Members withdrew)

Secretary's Report

Mr. SECRETARY.—Sir, I beg to lay on the Table a statement showing the Bills which have received the assent of the Governor or the President as the case may be, subsequent to the Report made during the previous Session.

---

* * * * Matter not recorded as directed by the Chair.